# ನಿರ್ಮಾಲ್ಯ ವಿಸರ್ಜನಾ ಒಳಲೆ

15ನೇ ಶತಮಾನದಲ್ಲಿ ವಿಜಯನಗರ ಅರಸರ ಸಾಮಂತ ದೊರೆಯಾಗಿದ್ದ ಕೆಳದಿಯ ಶ್ರೀ ಚೌಡಪ್ಪನಾಯಕ ಇವರು ಶ್ರೀ ರಾಮೇಶ್ವರ ದೇವಸ್ಥಾನ ಅಭಿವೃದ್ಧಿಪಡಿಸಿದ ಇತಿಹಾಸವಿದೆ. ಸಾಗರಕ್ಕೆ 10 ಕಿ.ಮೀ. ದೂರದಲ್ಲಿದೆ ಈ ದೇವಾಲಯ. ದೇವಸ್ಥಾನದ ಪೌಳಿಗೋಡೆ ತುಂಬಾ ಆರ್ಕಷಣೆಯ ಚಿತ್ರಗಳ ಮಹಾಪೂರವೇ ಇದೆ. ಪ್ರದಕ್ಷಿಣೆ ಬಂದಾಗ ಕಾಣುವ ದೇವರಿಗೆ ಮಾಡಿಸುವ ಮಂಗಳ ಸ್ನಾನದ ವಿಸರ್ಜನಾ ಒಳಲೆ ಶಿಲ್ಪಿಯ ಕಲಾ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ.

ಹಸಿರು ಮಿಶ್ರಿತ ಕಪ್ಪು ಬಣ್ಣದ ಶಿಲೆ ಹೊಯ್ಸಳ ದ್ರಾವಿಡ ಶೈಲಿಯಲ್ಲಿದೆ. ಬಾಳೆಗೊನೆಯ ಆಕಾರ ಇದ್ದು ಅದರ ಕೆಳಗೆ ಆನೆ, ಅದರ ಮೇಲೆ ಅಂಬಾರಿ, ಮೇಲೆ ದೊರೆಯ ಪರಿವಾರ. ಕೆಳಗೆ ಆನೆ ತಡೆಯುತ್ತಿರುವ ಮಾವುತನ ಚಿತ್ರವಿದೆ.

**-ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**





# ಹೊನ್ನಾಳಿಯ ಮಹಿಷಾಸುರ

ಮೈಸೂರಿನ ಚಾಮುಂಡಿ ಮಹಿಷಾಸುರ ವಿಗ್ರಹವನ್ನು ನೋಡಿರುತ್ತೇವೆ. ಇದೇ ತರಹದ ಮಹಿಷಾಸುರ ವಿಗ್ರಹವೊಂದನ್ನು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಟ್ಟಣದ ದುರ್ಗೆ ಗುಡಿಯ ಬಡಾವಣೆಯ ಶ್ರೀ ಮಾರಿಕಾಂಬ ದೇವಸ್ಥಾನದ ಮುಂಭಾಗದಲ್ಲಿ ಕಾಣಬಹುದು. ಸುಮಾರು 15 ಅಡಿ ಎತ್ತರವಿರುವ ಈ ವಿಗ್ರಹ ಮೈಸೂರಿನ ಮಹಿಷಾಸುರನನ್ನು ನೆನಪಿಸುವಂತಿದೆ.

**-ಎಂ. ರಾಘವೇಂದ್ರ ದುಂಡಿ, ದಾವಣಗೆರೆ**

# ಶಾಲೆಗಳಿಗೆ ಬಂದವು ಪ್ಲಾಸ್ಟಿಕ್ ಮೂತ್ರಿಗಳು

ಕೊಪ್ಪಳ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಅನುಪಯುಕ್ತ 20 ಲೀ.ನ. ಪ್ಲಾಸ್ಟಿಕ್ ಕ್ಯಾನ್‌ಗಳಿಂದ ಅಲ್ಪ ವೆಚ್ಚದಲ್ಲಿ ಪೈಪುಗಳನ್ನು ಬಳಸಿ ಮಕ್ಕಳಿಗೆ ದಿಢೀರ್ ಮೂತ್ರಾಲಯಗಳನ್ನು ಕಟ್ಟಿಸುವ ಪರಿಪಾಠ ಪ್ರಾರಂಭವಾಗಿದೆ. ಮಕ್ಕಳಲ್ಲಿ ಸ್ವಚ್ಛತೆ, ಆರೋಗ್ಯ ಹಾಗೂ ಪುನರ್ ಬಳಕೆಯ ಪಾಠವನ್ನು ತಲುಪಿಸುವುದು ಇದರ ಹಿಂದಿನ ಉದ್ದೇಶ. ಇತ್ತೀಚೆಗೆ ಕೊಪ್ಪಳ ತಾಲ್ಲೂಕಿನ ಅಗಳಕೇರಾ ಮಾದರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾದ ಪರಶುರಾಮ ಪಲ್ಲೇದರವರ ಉಸ್ತುವಾರಿಯಲ್ಲಿ ಪ್ಲಾಸ್ಟಿಕ್ ಮೂತ್ರಿಗಳನ್ನು ರಂಗು ರಂಗಾದ ರೀತಿಯಲ್ಲಿ ನಿರ್ಮಿಸಿದ ಬಗೆ ಹೀಗಿದೆ. ಈ ಬಗೆಯ ಮೂತ್ರಾಲಯಗಳನ್ನು ನಿರ್ಮಿಸಿಕೊಡಲು ಕುಶಲಕರ್ಮಿಗಳ ದಂಡೇ ಅಸ್ತಿತ್ವಕ್ಕೆ ಬಂದಿದೆ!!

**-ರಾಮಪ್ರಸಾದ ಬಿ., ಅಗಳಕೇರಾ**

